

ಹಾಸನದ ರುದ್ರಪಟ್ಟಣ ಮೂಲದ ಶಶಾಂಕ್ ಸುಬ್ರಹ್ಮಣ್ಯಮ್ ಕೊಳಲಿನಲ್ಲಿ ತಮ್ಮದೇ ಆದ 'ಶಶಾಂಕ್ ಸ್ಟೈಲ್ ಆಫ್ ಕರ್ನಾಟಿಕ್ ಫ್ಲೂಟ್' ಮೂಲಕ ದೇಶ ವಿದೇಶಗಳಲ್ಲಿ ಬಹಳ ಜನಪ್ರಿಯತೆ ಗಳಿಸಿದವರು. ವೇಣುವಾದನ ನಿಪುಣ ಶಶಾಂಕ್ ಅವರಿಗೆ ಫ್ರಾನ್ಸ್ ಸರ್ಕಾರದ ಪ್ರತಿಷ್ಠಿತ 'ಫ್ರೆಂಚ್ ನೈಟ್‌ಹುಡ್' ಪ್ರಶಸ್ತಿ ಸಂದಿದೆ. ಈ ಸಂದರ್ಭದಲ್ಲಿ ತಮ್ಮ ಸಂಗೀತ ಸಾಧನೆ ಮತ್ತು ಪ್ರಯೋಗಗಳ ಬಗ್ಗೆ ಅವರು 'ಸುಧಾ'ದೊಂದಿಗೆ ಮಾತನಾಡಿದ್ದಾರೆ.

■ ಸಂದರ್ಶನ: **ಉಮಾ ಅನಂತ್**

# ಸಂಗೀತದ ಮೂಲ ಅಂತರರಾಷ್ಟ್ರೀಯ ಸೌಹಾರ್ದ...

**◆ ಬಿದಿರಿನಿಂದ ಮಾಡಿದ ಹಗುರ ವಾದ್ಯ ಕೊಳಲು. ಇದನ್ನು ಗಾಯನದಲ್ಲಿ ಪಕ್ಕವಾದ್ಯವಾಗಿ ಮಾತ್ರ ಬಳಸಲಾಗುತ್ತಿತ್ತು. ಈಗ ವೇಣುವಾದನ ಸ್ವತಂತ್ರ ವಾದ್ಯವಾಗಿ ಸ್ಥಾನಮಾನ ಪಡೆದಿದೆ. ಇದಕ್ಕೆ ನಿಮ್ಮ ಕೊಡುಗೆಯೂ ಇದೆ. ಈ ಬಗ್ಗೆ ಹೇಳಿ.**

ಖಂಡಿತವಾಗಿ ಕೊಳಲು ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ಒಂದು ಪ್ರಮುಖ ಪಕ್ಕವಾದ್ಯವೇ ಆಗಿತ್ತು. ಕರ್ನಾಟಕ ಸಂಗೀತದಲ್ಲಿ ಹಿಂದಿನಿಂದಲೂ ಗಾಯನಕ್ಕೆ ಹೆಚ್ಚಿನ ಮಹತ್ವ. ವಾದನ ಎಂದರೆ ಅದು ಗಾಯನಕ್ಕೆ ಪಕ್ಕವಾದ್ಯ ಮಾತ್ರ ಎಂಬ ಭಾವನೆಯೇ ಇತ್ತು. ಅಲ್ಲದೆ ಜನರ ಆದ್ಯತೆಯೂ ಸುಷಿರ ವಾದ್ಯ ಕೊಳಲು, ಗಾಯನದ ಜೊತೆಗೇ ಇರಬೇಕು ಅಂತ ಆಗಿತ್ತು. ಇದು ಗಾಯಕ/ಗಾಯಕಿಯರ ಶಾರೀರಕ್ಕೆ ಸನಿಹ ಇರಬೇಕು, ಅವರು ಹಾಡಿದಂತೆಯೇ ಕೊಳಲ ನಾದ ಸ್ವರಗಳಲ್ಲಿ ಮಾರ್ದನಿಸಬೇಕು ಎಂದೂ ಬಯಸುತ್ತಿದ್ದರು. ಆಗಿನ ಕಾಲದಲ್ಲಿ ತವಿಲ್ ಹಾಗೂ ನಾದಸ್ವರ (ಎರಡೂ ಟೆಂಪಲ್ ವಾದ್ಯಗಳು) ಮಾತ್ರ ಸ್ವತಂತ್ರ ವಾದನವಾಗಿ ಬಳಕೆಯಲ್ಲಿದ್ದವು. ವೀಣೆ, ಕೊಳಲು, ಪಿಟೀಲು, ಜೊತೆಗೆ ಹಿಂದೂಸ್ತಾನಿ ಗಾಯನದೊಂದಿಗೆ ಹಾರ್ಮೋನಿಯಂ ಸಾಥಿವಾದ್ಯವಾಗಿಯೇ ಇತ್ತು.

ಕೊಳಲಿನಲ್ಲಿ ಟಿ. ಆರ್. ಮಹಾಲಿಂಗಂ, ಬಾನ್ಸುರಿಯಲ್ಲಿ ಪನ್ನಾಲಾಲ್ ಘೋಷ್ ಮುಂತಾದ ದಿಗ್ಗಜರು ಇದಕ್ಕೆ ಸ್ವತಂತ್ರ ಸ್ಥಾನಮಾನ ಬೇಕೆಂದು ಸೋಲೊ ಕಛೇರಿ ಕೊಡಲಾರಂಭಿಸಿದರು. ಆಮೇಲೆ ವಾದ್ಯಗಾರರು ನಿಪುಣರಾಗಿರುವುದರಿಂದ ಸೋಲೊ ವಾದ್ಯ ನುಡಿಸಲಾರಂಭಿಸಿದರು. ಇದರ ಫಲವಾಗಿ ವೀಣೆ, ಪಿಟೀಲು, ಕೊಳಲು ಎಲ್ಲವೂ ಸ್ವತಂತ್ರವಾದ್ಯಗಳಾಗಿ ರೂಪುಗೊಂಡವು. ಈಗ ಎಲ್ಲ ವಾದ್ಯಗಳನ್ನೂ ಸ್ವತಂತ್ರವಾಗಿ ನುಡಿಸುವ ಮೂಲಕ ಸೋಲೊ, ಜುಗಲ್‌ಬಂದಿ ಪರಿಕಲ್ಪನೆ ಪಕ್ವವಾಗಿ ಸಂಗೀತಕ್ಕೆ ಸ್ಪಷ್ಟ ರೂಪ ದೊರೆತಿದೆ. ಕೇಳುಗರೂ ತಲೆದೂಗತೊಡಗಿದ್ದಾರೆ. ನಾನು ನನ್ನದೇ ಶೈಲಿಯನ್ನು ರೂಢಿಸಿಕೊಂಡು 'ಶಶಾಂಕ್ ಸ್ಟೈಲ್ ಆಫ್ ಫ್ಲೂಟ್' ಅನ್ನು ಜನಪ್ರಿಯಗೊಳಿಸಿದೆ. ಸೋಲೊ ಕಛೇರಿಗಳಲ್ಲೇ ಯಶ ಸಾಧಿಸಿದೆ.

**◆ ಕೊಳಲಿನಲ್ಲಿ ಹೆಚ್ಚು ಪರಿಪೂರ್ಣರಾಗಲು ಗಾಯನ ಕಲಿಕೆ ಸಹಕಾರಿ. ನುಡಿಸಾಣಿಕೆಯೂ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ನಿಮ್ಮ ಅನಿಸಿಕೆ ಏನು?**

ಕೊಳಲು ಕಲಿಯುವ ಮುನ್ನವೇ ಗಾಯನ ಕಲಿತರೆ ಸಂಗೀತದ ಸಂಪೂರ್ಣ ಪರಿಚಯವಾಗುತ್ತದೆ. ಕೊಳಲಿನಲ್ಲಿ ಫಿಂಗರಿಂಗ್ ಟೆಕ್ನಿಕ್ ಕಲಿತರೆ ಬಹುಬೇಗನೆ ಯಶಸ್ಸು ಸಾಧಿಸಬಹುದು. ಹೀಗಾಗಿ ನನ್ನ ತಂದೆ ಮೊದಲು ನನ್ನನ್ನು ವಿದ್ವಾನ್ ಕೆ.ವಿ. ನಾರಾಯಣಸ್ವಾಮಿ ಅವರ ಬಳಿ ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಿಯಲು ಸೇರಿಸಿದರು. ಕೆಲವು ವರ್ಷಗಳ ಬಳಿಕ ಪಂ. ಜಸರಾಜ್ ಅವರ ಬಳಿ ಹಿಂದೂಸ್ತಾನಿ ಸಂಗೀತವನ್ನೂ ಕಲಿತೆ. ಕೊಳಲಿನ ತಂತ್ರಗಾರಿಕೆಯನ್ನು ತಂದೆಯವರ ಬಳಿಯೇ ಪಡೆದುಕೊಂಡು ನನ್ನ ಸ್ವಂತ ಶೈಲಿಯನ್ನು ಕೊಳಲಿನಲ್ಲಿ ಅಭ್ಯಾಸ ಮಾಡಿದೆ. ನಮ್ಮದೇ ಆದ ಶೈಲಿಯಲ್ಲಿ ನುಡಿಸುವುದರಿಂದ ನುಡಿಸಾಣಿಕೆಯಲ್ಲಿ ಐಡೆಂಟಿಟಿ ಇರುತ್ತದೆ. ಶೈಲಿ ಎಂದರೆ ಅದು ಒಬ್ಬರ ಸಿಗ್ನೇಚರ್ ಇದ್ದಂತೆ. ಕೊಳಲಿನಲ್ಲಿ ಗಮಕ, ಮೀಂಡ್, ಮನೋಧರ್ಮ, ಫ್ಲೇವರ್ ಎಲ್ಲವನ್ನೂ ಅಳವಡಿಸಿಕೊಂಡೆ. ಈಗಲೂ ಹೊಸದಾಗಿ ಕೊಳಲು ಕಲಿಯುವವರಿಗೆ ನಾನು ಹೇಳುವುದಿಷ್ಟೆ – ಮೊದಲು ಗಾಯನ ಕಲಿಯಿರಿ. ಆಮೇಲೆ ಕೊಳಲು ಅಭ್ಯಾಸ ಮಾಡಿ. ಬೇಗ ಸಾಧಿಸುತ್ತೀರಿ.

**◆ ಜುಗಲ್‌ಬಂದಿ ಕಛೇರಿಗಳಲ್ಲಿಯೂ ಛಾಪು ಮೂಡಿಸಿದವರು ನೀವು. ಘಟಾನುಘಟಿ**